**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹಿರಿಯೂರು**

**Crl.Mis.No.242/2022**

| | | | |
|---|---|---|---|
| ಹೆಸರು | - | ಲೋಕೇಶ್ ಕೆ. | ಪಿಡಬ್ಲ್ಯೂ- 1 |
| ತಂದೆಯ ಹೆಸರು | - | ಲೇ. ಕರಿಯಣ್ಣ | |
| ವಯಸ್ಸು | - | 50 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ | - | ಆಲೂರು ಗ್ರಾಮ | |

**ದಿನಾಂಕಃ30.12.2022 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಕೆ ಆರ್ ವಕೀಲರಿಂದಃ**

ನಾನು ಈ ಪ್ರಕರಣದಲ್ಲಿ ಅರ್ಜಿದಾರನಾಗಿದ್ದೇನೆ. ಈರಪ್ಪ ಬಿನ್ ಜಾಲಪ್ಪ ಎಂದರೆ ನನ್ನ ಮುತ್ತಜ್ಜ. ನನ್ನ ಮುತ್ತಜ್ಜ ದಿನಾಂಕ :10.05.1965 ರಂದು ಆಲೂರು ಗ್ರಾಮದಲ್ಲಿರುವ ನಮ್ಮ ಮನೆಯಲ್ಲಿ ಮೃತಪಟ್ಟಿದ್ದಾರೆ. ನಮಗೆ ತಿಳುವಳಿಕೆ ಇಲ್ಲದ ಕಾರಣ ನನ್ನ ಮುತ್ತಜ್ಜನ ಮರಣದ ದಿನಾಂಕವನ್ನು ಸಕಾಲದಲ್ಲಿ ನೊಂದಣಿ ಮಾಡಿಸಲು ತಹಶೀಲ್ದಾರರಿಗೆ ತಿಳಿಸಿಲ್ಲ. ಜಮೀನು ಖಾತೆ ಬದಲಾಯಿಸಿಕೊಳ್ಳಲು ನನ್ನ ಮುತ್ತಜ್ಜನ ಮರಣ ಪ್ರಮಾಣ ಪತ್ರದ ಅವಶ್ಯಕತೆ ಇದೆ. ನನ್ನ ಮುತ್ತಜ್ಜನ ಮರಣ ಪ್ರಮಾಣ ಪತ್ರ ನೀಡುವಂತೆ ನಾನು ಅರ್ಜಿ ಸಲ್ಲಿಸಿದಾಗ ತಹಶೀಲ್ದಾರರು ಅಲಭ್ಯ ಪ್ರಮಾಣ ಪತ್ರವನ್ನು ನೀಡಿರುತ್ತಾರೆ ಸದರಿ ಅಲಭ್ಯ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು ಅದನ್ನು **ನಿಪಿ-1** ಎಂದು ಗುರುತಿಸಲಾಯಿತು. ರಾಜಸ್ವ ನಿರೀಕ್ಷಕರ ವರದಿಯನ್ನು **ನಿಪಿ-2** ಎಂದು, ಗ್ರಾಮಲೆಕ್ಕಿಗರ ವರದಿಯನ್ನು **ನಿಪಿ-3** ಎಂದು , ಮಹಜರನ್ನು **ನಿಪಿ-4** ಎಂದು, ವಂಶವೃಕ್ಷ ವಿವರಿಸುವ ಪ್ರಮಾಣ ಪತ್ರವನ್ನು **ನಿಪಿ-5** ಎಂದು ಗುರ್ತಿಸಲಾಯಿತು. ಈ ಪ್ರಕರಣದ ಬಗ್ಗೆ ದಿನಾಂಕ:10.12.2022 ರ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಹೊರಡಿಸಿದ ಸಾರ್ವಜನಿಕ ಪ್ರಕಟಣೆಯನ್ನು **ನಿಪಿ-6** ಎಂದು ಗುರ್ತಿಸಲಾಯಿತು. ನಾನು ನನ್ನ ಆಧಾರ್ ಕಾರ್ಡನ್ನು ಅದರ ನೋಟರೀಕೃತ ಪ್ರತಿಯೊಂದಿಗೆ ಹಾಜರು ಪಡಿಸಿದ್ದು ಆ ಪ್ರತಿಯನ್ನು ಮೂಲ ದಾಖಲೆಯೊಂದಿಗೆ ಹೋಲಿಸಿ ನೋಡಿ ಅದನ್ನು **ನಿಪಿ.7** ಎಂದು ಗುರುತಿಸಿ ಮೂಲ ಆಧಾರ್ ಕಾರ್ಡನ್ನು ಸಾಕ್ಷಿಗೆ ಹಿಂತಿರುಗಿಸಲಾಯಿತು.ಜಮೀನು ಖಾತೆ ಬದಲಾಯಿಸಿಕೊಳ್ಳಲು ನನ್ನ ಮುತ್ತಜ್ಜನ ಮರಣ ಪ್ರಮಾಣ ಪತ್ರದ ಅವಶ್ಯಕತೆ ಇದ್ದು ಆದಕಾರಣ ಅರ್ಜಿಯನ್ನು ಪುರಸ್ಕರಿಸಿ ಎದುರುದಾರರಿಗೆ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಆದೇಶ ಮಾಡಬೇಕೆಂದು ಕೋರುತ್ತೇನೆ .

**ಎದುರುದಾರರು ನ್ಯಾಯಾಲಯಕ್ಕೆ ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಗಿದೆ )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ , ಹಿರಿಯೂರು.